# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 452

ಸದಸ್ಯರ ಹೆಸರು : ಶ್ರೀ ಎಸ್ ರವಿ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 13.08.2025

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿನ ರಾಜರಾಜೇಶ್ವರಿ ನಗರದ ದರ್ಶನ್ ಫಾರಂ ರಸ್ತೆಯಿಂದ (ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಸ್ಕೂಲ್) ಯಾವ ಯಾವ ಮಾರ್ಗವಾಗಿ ಸಾರಿಗೆ ಸೌಲಭ್ಯವಿದೆ; | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಪ್ರಸ್ತುತ ರಾಜರಾಜೇಶ್ವರಿ ನಗರದ ದರ್ಶನ್ ಫಾರಂನಿಂದ (ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಸ್ಕೂಲ್) ಬೆಳಿಗ್ಗೆ 08:00 ಗಂಟೆಗೆ ನಾಯಂಡನಹಳ್ಳಿ, ಸಿರ್ಸಿ ಸರ್ಕಲ್ ಮಾರ್ಗವಾಗಿ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಹಾಗೂ ಸಂಜೆ 06:20 ಗಂಟೆಗೆ ಕೆಂಪೇಗೌಡ ಬಸ್ ನಿಲ್ದಾಣದಿಂದ ರಾಜರಾಜೇಶ್ವರಿ ನಗರದ ದರ್ಶನ್ ಫಾರಂಗೆ ಸಾರಿಗೆ ಸೌಲಭ್ಯವಿರುತ್ತದೆ. |
| ಆ) | ಎಷ್ಟು ಬಸ್‌ಗಳನ್ನು ಅಲ್ಲಿನ ಸಾರ್ವಜನಿಕರಿಗಾಗಿ ಸೌಲಭ್ಯವನ್ನು ಒದಗಿಸಲಾಗಿದೆ; | |
| ಇ) | ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಸ್ಕೂಲ್‌ನ ಹತ್ತಿರ ವಾಸಿಸುವ ಅಲ್ಲಿನ ಸ್ಥಳೀಯ ಜನತೆಗೆ ಯಾವುದೇ ಸಾರಿಗೆ ಸೌಲಭ್ಯವಿಲ್ಲದಿರುವುದರಿಂದ, ಇರುವ ಒಂದೇ ಒಂದು ಬಸ್ಸಿಗಾಗಿ ಗಂಟೆಗಟ್ಟಲೆ ಕಾಯಬೇಕಾಗಿದ್ದು, ಇದರಿಂದ ಜನರು ಕಚೇರಿಯ ಕೆಲಸ ಕಾರ್ಯಗಳಿಗೆ ಹಾಗೂ ಶಾಲಾ ಮಕ್ಕಳು ಶಾಲೆಗೆ ಸರಿಯಾದ ಸಮಯಕ್ಕೆ ತಲುಪಲು ಸಾಧ್ಯವಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೈಗೊಂಡ ಕ್ರಮಗಳೇನು ; | ಮುಂದುವರೆದು, ರಾಜರಾಜೇಶ್ವರಿ ನಗರದ ದರ್ಶನ್ ಫಾರಂನಿಂದ ಕಾಲ್ನಡಿಗೆ ಅಂತರದಲ್ಲಿರುವ ಜವರೇಗೌಡನಗರ ಬಸ್ ನಿಲುಗಡೆ ಮಾರ್ಗವಾಗಿ ಮಾರ್ಗ ಸಂಖ್ಯೆ: ಎಂಎಫ್-38 ರಲ್ಲಿ 12 ಸುತ್ತುವಳಿಗಳನ್ನು ಹಾಗೂ ಹೊಸಕೆರೆಹಳ್ಳಿ ಶನೇಶ್ವರ ದೇವಸ್ಥಾನ ಮಾರ್ಗವಾಗಿ ಮಾರ್ಗ ಸಂಖ್ಯೆ: 43-ಜೆ, 43-ಜೆಎ ಹಾಗೂ 43-ಎಂ ಗಳಲ್ಲಿ 3 ಅನುಸೂಚಿಗಳಿಂದ 28 ಸುತ್ತುವಳಿಗಳನ್ನು ಆಚರಣೆಗೊಳಿಸಲಾಗುತ್ತಿದೆ. ಹಾಲಿಯಿರುವ ಸಾರಿಗೆಗಳನ್ನು ಪ್ರಯಾಣಿಕರ ಅವಶ್ಯಕತೆಗನುಗುಣವಾಗಿ ಕಾರ್ಯಾಚರಿಸಲಾಗುತ್ತಿವೆ. |
| ಈ) | ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಸ್ಕೂಲ್‌ನ ಹತ್ತಿರ ನಿವಾಸಿಗಳಿಗೆ ಅನುಕೂಲವಾಗಲು ಸದರಿ ಜಾಗದಿಂದ ವಿಧಾನಸೌಧಕ್ಕೆ ಬೆಳಿಗ್ಗೆ 09.30ಕ್ಕೆ ಹಾಗೂ ಸಂಜೆ: 05.40ಕ್ಕೆ ವಿಧಾನಸೌಧದಿಂದ ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಸ್ಕೂಲ್ ಹತ್ತಿರ ನಿಲ್ದಾಣಕ್ಕೆ ಒಂದು ಬಿ.ಎಂ.ಟಿ.ಸಿ., ಬಸ್ ಸೌಕರ್ಯವನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಹಾಗಿದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು ? | ಪ್ರಸ್ತುತ ಕೃಷ್ಣಪ್ಪ ಬಡಾವಣೆಯಿಂದ ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಸ್ಕೂಲ್‌ನಿಂದ ಕಾಲ್ನಡಿಗೆ ಅಂತರದಲ್ಲಿರುವ ಹೊಸಕೆರೆಹಳ್ಳಿ ಶನೇಶ್ವರ ದೇವಸ್ಥಾನ ಮಾರ್ಗವಾಗಿ ವಿಧಾನಸೌಧಕ್ಕೆ ಬೆಳಿಗ್ಗೆ 09:00 ಗಂಟೆಗೆ ಹಾಗೂ ಸಂಜೆ 05:45 ಗಂಟೆಗೆ ವಿಧಾನಸೌಧದಿಂದ ಸಾರಿಗೆ ಸೌಲಭ್ಯವಿರುತ್ತದೆ.<br>ಪ್ರಸ್ತುತ ಸಾರ್ವಜನಿಕ ಪ್ರಯಾಣಿಕರ ಬೇಡಿಕೆ/ ಅವಶ್ಯಕತೆಗನುಗುಣವಾಗಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. ಸಾರ್ವಜನಿಕ ಪ್ರಯಾಣಿಕರು ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳು ಸದರಿ ಸಾರಿಗೆಗಳ ಸದುಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. |

ಸಂಖ್ಯೆ: ಟಿಡಿ 147 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು